ತಕ್ಕ ತನ್ನದೇ ಡೈಲಾಗುಗಳನ್ನು ಕ್ಷಣ ಮಾತ್ರದಲ್ಲೇ ಹೊಸೆಯಬಲ್ಲ ಪರಿಣಿತಳು. ನಾಟಕ ಶುರುವಾಗುವ ಗಂಟೆ ಮುಂಚೆ ಬರುತ್ತೇನೆಂದು ಹೇಳಿ ಕಳುಹಿಸಿದ್ದಳು.

ಪರಸ ಮಾತ್ರ ವೇದಿಕೆಯ ಪಕ್ಕದಲ್ಲಿ ನಿಂತು ಗಂಜಿ ಹಾಕಿದ ಶರ್ಟಿನ ಜೇಬಿನಲ್ಲಿ ಆಗಾಗ ಕೈ ಹಾಕಿ ಹೋಗಿ ಬರುವವರಿಗೆಲ್ಲ ಒಂದು ವಿಲಕ್ಷಣ ನಗುವನ್ನು ಬೀರುತ್ತಾ ನಿಂತಿದ್ದ. ಅಸಲಿಗೆ ತಾನು ಕಾಯುತ್ತಿರುವ ಪ್ರಮಿಳಾ ಅಲ್ಲೆಲ್ಲೂ ಕಾಣಿಸುತ್ತಲೇ ಇಲ್ಲವಲ್ಲ, ಎಲ್ಲಿದ್ದಾಳು? ಕ್ವಾಣೆಯ ಒಳಗೂ ಹೊರಗೂ ಎಲ್ಲೂ ಕಾಣಿಸಿರಲಿಲ್ಲ! ಇವತ್ತು ಆಗಿದ್ದಾಗ್ಲಿ ಆಕಿತಾಗ ಮಾತಾಡ್ಲೇಬೇಕು ಎಂದು ಶಪಥಗೈದಿದ್ದ ಪರಸನ ಮುಖದಲ್ಲಿ ಸಹಜವಾಗಿಯೇ ಆಕೆ ಕಾಣಿಸದಿದ್ದಕ್ಕೆ ಪ್ರಪಂಚದ ಎಲ್ಲ ನಮೂನೆಯ ದುಗುಡ ಕಾಣಿಸುತ್ತಿತ್ತು.

ವೇದಿಕೆಯಲ್ಲಿ ಕಾರ್ಯಕ್ರಮ ಅದಾಗಲೇ ಶುರುವಾಗಿ ಅವರು ಇವರನ್ನು, ಇವರು ಅವರನ್ನು ಬಾಯಿ ತುಂಬಾ ಹೊಗಳುವುದು, ಸನ್ಮಾನ ಮಾಡುವುದು ನಡೆದೇ ಇತ್ತು. ನಾಟಕ ಶುರುವಾಗಲಿದೆ ಎಂದು ಮೈಕಿನಲ್ಲಿ ಹೇಳಿದಾಗ ಒಂದೆರಡು ನಿಮಿಷ ಮೈಕು ಕುಯ್ ಎಂದು ಕಿವಿ ಅವುಡುಗಚ್ಚುವಂತೆ ಕೂಗಿಕೊಂಡಿತು. ವೇದಿಕೆ ಮೇಲಿದ್ದವರೆಲ್ಲಾ ಕೆಳಗಡೆ ಬಂದು ಹಾಕಿದ್ದ ಚೇರುಗಳಲ್ಲಿ ಕುಳಿತು ನಾಟಕ ಶುರುವಾಗುವುದನ್ನು ಎದುರು ನೋಡುತ್ತಿದ್ದರು.

ವೇದಿಕೆಯ ಮೇಲಿನ ಲೈಟುಗಳೆಲ್ಲಾ ನಂದಿಹೋಗಿ ಕತ್ತಲು ಆವರಿಸಿತು.

''ಯಾವನಲೋ ಬಾಡ್ಯ ಸೊಂಟಕ್ ಕೈ ಹಾಕನು, ಮುಕುಳಿ ತೊಳಕಣಾಕ ಕೈ ಇಲ್ಲದಂಗ ಮಾಡೇನು ಹಿಂದುಕ್ ಸರುಕೊಂಡ್ ಕುಂತಗಾ'' ಅಂತ ಹೆಂಗಸೊಬ್ಬಳ ದೊಡ್ಡ ದನಿ ಕೇಳಿಸಿತು. ಒಂದೆರಡು ನಿಮಿಷಗಳ ಕಾಲ ಗಲಾಟೆಯ ವಾತಾವರಣ ಏರ್ಪಟ್ಟಿತು. ಗಲಾಟೆ ಮಾಡದೆ ಸಭ್ಯವಾಗಿ ವರ್ತಿಸುವಂತೆ ವೇದಿಕೆಯ ಮೇಲಿಂದ ಮನವಿ ಮಾಡುತ್ತಿದ್ದರೂ ಅದನ್ನು ನಿರ್ಲಕ್ಷಿಸಿ ಗದ್ದಲವಿತ್ತು.

ಗಣೇಶನ ಪ್ರಾರ್ಥನೆಯೊಂದಿಗೆ ನಾಟಕ ಶುರುವಾಗುತ್ತದೆ. ಹಾರ್ಮೋನಿಯಂ, ತಬಲದ ಜೊತೆ ಅಪಶ್ರುತಿ ಮುಚ್ಚಿ ಹೋಗುತ್ತದೆ. ವೇದಿಕೆಯ ಮಧ್ಯ ಭಾಗದಲ್ಲಿ ಬೆಳಕು ಕೇಂದ್ರೀಕೃತವಾಗುತ್ತದೆ. ಕೇಸರಿ ಬಣ್ಣದ ಸೀರೆಯುಟ್ಟು ಮುಂಗೈಯಿಗೆ, ಮುಡಿಗೆ ಮಲ್ಲಿಗೆ ಹೂವನ್ನು ಸುತ್ತಿಕೊಂಡು, ಕೊರಳಲ್ಲಿ ಒಂದಷ್ಟು ಚಿಕ್ಕ ಗಾತ್ರದ ರುದ್ರಾಕ್ಷಿ ಮಣಿಗಳುಳ್ಳ ಹಾರ, ಕಣ್ಣುಗಳಲ್ಲಿ ಬೆಳಕಿಲ್ಲ, ಕಳೆಗುಂದಿರುವ ಮುಖ, ದುಃಖತಪ್ತಳಾಗಿ ಕುಳಿತಿದ್ದಾಳೆ.

“ಅಲೇ ಇಳ್ವವ್ವ, ಇಟಾತಕನ ಕೇರಿ ಎಲ್ಲ ಹುಡುಕ್ಯಾಡಿದೆ. ಇಲ್ಲೇ ಅದಾಳಲ! ಕತ್ತಲ ನಡುವೆ ದೀಪದಂಗ ನಿಂತಾಳ, ಏಟು ಛಂದದಾಳ, ಏಸ್ ಕಳ್ ಸೂಳ್ಯಾಮಕ್ಳು ಕಣ್ಣು ಬಿಟ್ಟಾರೇನೊ!'' ಮನಸಲ್ಲಿಯೇ ಹತ್ತೂ ಬೆರಳುಗಳನ್ನು ಲಟಲಟನೆ ಮುರಿದು ದೃಷ್ಟಿ ತೆಗೆದು, ಮಂತ್ರಮುಗ್ಧನಾದವನಂತೆ ನೋಡುತ್ತಾ ಕೂತುಬಿಟ್ಟ.

ವೇದಿಕೆಯ ಎದುರಿಗೆ ಪ್ಲಾಸ್ಟಿಕು ಚೇರುಗಳಲ್ಲಿ ವಿರಾಜಮಾನರಾಗಿದ್ದ ಶಾಸಕ ಮಡ್ಡಿ ಭೀಮಲಿಂಗ ಧಣಿ ಕಣ್ಣುಗಳನ್ನು ಗೇಣುದ್ದಾ ಅರಳಿಸಿ ಆಕೆಯ ನೀಳ ದೇಹದ ಆಯಕಟ್ಟಿನ ಜಾಗಗಳನ್ನು ತಿಂದುಹಾಕುವವನಂತೆ ನೋಡುತ್ತಿದ್ದ. ಬಲಗೈಯಿಂದ ಎಡಗೈಯ ಮುಂಭಾಗವನ್ನು, ಎಡಗೈಯಿಂದ ಎದೆಯ ಭಾಗವನ್ನು ಕೆರೆದುಕೊಳ್ಳುತ್ತಾ ಪಕ್ಕದಲ್ಲೇ ಕುಳಿತಿದ್ದ ಪಿಎನ ಕಿವಿಯಲ್ಲಿ ಏನನ್ನೋ ಹೇಳಿದ.

ಪ್ರಮಿಳಾಳು ಸೀತೆಯನ್ನು ಆವಾಹಿಸಿಕೊಂಡವಳಂತೆ ಭಾವಪರವಶವಾಗಿ ನಟಿಸಿ ಇಡೀ ನಾಟಕವನ್ನು ಆವರಿಸಿಕೊಂಡಳು. ಜನರಂತೂ ಮಂತ್ರಮುಗ್ಧರಾದಂತೆ ನೋಡತೊಡಗಿದರು. ಕೆಲವರಂತೂ ಸೀತೆಯ ಕಷ್ಟಗಳನ್ನು ನೋಡಿ ಸೆರಗಿನಿಂದ ಒದ್ದೆ ಕಣ್ಣುಗಳನ್ನು ಒರೆಸಿಕೊಂಡರು. ಜೇಬಿನಲ್ಲಿದ್ದ ಕೆಲವೇ ನೋಟುಗಳನ್ನು ತಮಗೆ ಅರಿವಿಲ್ಲದಂತೆ ಸೀತೆ ಪಾಲ್ಟು ಮಾಡಿದ ಪ್ರಮಿಳಾಳಿಗೆ ಅಭಿಮಾನಪೂರ್ವಕವಾಗಿ ಇತ್ತರು.

ಮುಂದಿನ ಸಲವೂ ಕೂಡ ಈಕೆಯನ್ನೇ ಕರೆಸುವುದಾಗಿ ಮಾತನಾಡಿಕೊಂಡರು. ನಾಟಕ ನೋಡುತ್ತಾ ಅವುಚಿಕೊಂಡ ಕೂಸುಗಳು ನಿದ್ದೆಹೋಗಿದ್ದವು. ರಾತ್ರಿ ಎರಡೂವರೆ ಹೊತ್ತಿಗೆ ಅರ್ಧಕ್ಕರ್ಧದಷ್ಟು ಜನ ನಿದ್ರೆ ಹೋಗಿಯಾಗಿತ್ತು.

ವೇದಿಕೆಯ ಹಿಂದುಗಡೆ ತನ್ನ ಎಲ್ಲಾ ದೃಶ್ಯಗಳ ಅಭಿನಯ ಮುಗಿದು, ನಿಂತಿದ್ದ ಪ್ರಮಿಳಾಳ ಬಳಿ ಯಾರೋ ಬಂದು, ಕಿವಿಯಲ್ಲಿ ಏನೋ ಹೇಳಿದರು. ಪಕ್ಕಕ್ಕೆ ಕರೆದು ಸಾಹೇಬರ ಕಡೆ ಕೈ ತೋರಿಸಿ ಮಾತು ಮುಂದುವರೆಸಿದರು. ನೋಡ ನೋಡುತ್ತಿದ್ದಂತೆ ಪ್ರಮಿಳಾಳನ್ನು ಕರೆದುಕೊಂಡು ಹೋಗಿ ಇನ್ನೋವಾದಲ್ಲಿ ಕೂಡಿಸಿದರು. ತನ್ನ ಕಡೆ ಕೈ ಬೀಸುತ್ತಿರುವ ಆ ಹುಡುಗನೆಡೆ ತಾನೂ ಪ್ರೀತಿಯಿಂದ ನಗುತ್ತಾ ಕೈ ಬೀಸಿದಳು. ಸಾಹೇಬರು ಕೂತೊಡನೆ ಕಾರು ಕತ್ತಲಲ್ಲಿ ವೇಗವಾಗಿ ಮರೆಯಾಯಿತು.



ಮುಖ ಕಿವಿಚುತ್ತಾ ನಿದ್ದೆಯಿಂದೆದ್ದ ಪರಸ, ಗುಡಿಸಲಿಂದ ಮೈ ಮುರಿಯುತ್ತಾ ಹೊರಬಂದ. ಇನ್ನು ಸೀತೆಯ ಗುಂಗಿನಲ್ಲೇ ಇದ್ದ ಅವನ ಮನಸ್ಸು ಹೊಯ್ದಾಡುತ್ತಿತ್ತು. ನಾಯಿ ಮುಲುಕುತ್ತಿದ್ದದ್ದು, ಗಾಳಿ ಬೀಸಿ ಒಣಗಿದೆಲೆಗಳು ಬೀಳುತ್ತಿದ್ದದ್ದು, ದಾಕ್ಷಿಣವ್ವ ಜಳಕ ಮಾಡುತ್ತಿದದ್ದು, ಪಾರವ್ವಳ ಮಗು ಮೊಲೆ ಜಿಬುಕುತ್ತಿದ್ದದ್ದು ಕೇರಿಯ ಮೂಲೆ ಮೂಲೆಯ ಸದ್ದುಗಳು ಮಳೆಯೋಪಾದಿಯಲ್ಲಿ ಬಂದು ಪರಸನ ಕಿವಿಯೊಳಗೆ ಒಂದಿಡೀ ಸಂತೆಯನ್ನೇ ಹುಟ್ಟು ಹಾಕಿದ್ದವು.

***

ತಹಸೀಲ್ದಾರರ ಕಚೇರಿಯಲ್ಲಿ ಯಾವುದೋ ಹೊಲದ ಪತ್ರಗಳಿಗೆ ಸಹಿ ಮಾಡಿಸಲಿಕ್ಕೆಂದು ಕೂಡ್ಲಿಗಿಗೆ ಬಂದಿದ್ದ ಪರಸ ಜನಗಳು ತುಂಬಿಕೊಂಡು ತಿಪಿ ತಿಪಿ ಎನ್ನುತ್ತಿದ್ದ ಮಹದೇವ ಬಸ್ಸಿನಿಂದ ತಿಣುಕಾಡುತ್ತಾ ಕೆಳಗಿಳಿದ. ಸರ್ಕಲ್ಲಿನ ಹೋಟೆಲ್ಲಿನಲ್ಲಿ ಅರ್ಧ ಚಹಾ ಕುಡಿದು ಮುಖಕ್ಕೊಂದಷ್ಟು ನೀರು ಸವರಿಕೊಂಡು ಒಂದು ಪ್ಲಾಸ್ಟೀಕು ಚೀಲವನ್ನು ಮುದುರಿ ತನ್ನ ಕಂಕುಳಲ್ಲಿಟ್ಟುಕೊಂಡು ತಹಸೀಲ್ದಾರರ ಕಚೇರಿಗೆ ಬಂದ. ಅಲ್ಲಿದ್ದ ಕ್ಲರ್ಕು ಬಾಯಿಯಲ್ಲಿ ಎಲೆ ಅಡಿಕೆ ಹಾಕಿಕೊಂಡು ಜಮಡುತ್ತಿದ್ದ, ಹಿಂದಲೆಯನ್ನು ಕೆರೆದುಕೊಳ್ಳುತ್ತಾ, “ಸಾರು, ತಾಸಿಲ್ದಾರು ಐದಾರೆನ್ರಿ?”. ಮೂಗಿನ ಮೇಲಕ್ಕೆ ಚಾಳೀಸು ಏರಿಸುತ್ತ ಒಮ್ಮೆ ಕನಿಷ್ಠ ದೃಷ್ಟಿಯಲ್ಲಿ ನೋಡಿದ ಕ್ಲರ್ಕು ತಹಸೀಲ್ದಾರರ ಕೋಣೆಯತ್ತ ಕೈ ತೋರಿಸುತ್ತಾ, ''ಜನ ಕಾಯ್ತಿರೋದು ಕಾಣಿಸ್ತಾ ದಾ! ಸಾರು ಬೆಳಿಗ್ಗೆ ಹೋದೊರು ಇನ್ನ ಬಂದಿಲ್ಲಲೇ, ಒಂದು ತಾಸು ಬಿಟ್ಕಂಡ್ ಬಾ'' ಎಂದು ಹೇಳಿದವನೇ ತನ್ನ ಕೆಲಸದಲ್ಲಿ ಮಗ್ನನಾದ.

“ಹೊರಾಗ ನೋಡಿದ್ರ ಸೂಳಿಮುಗುಂದು ಹಾಳ್ ಬಿಸ್ಲು ಸುರಿತೈತಿ, ಒಳಾಗ ಜನ ತುಂಬ್ಯಾರ ಎತ್ಲಾಗ್ ಹೋಗಾಕೊ?'' ಎಂದು ಗೊಣಗುತ್ತಾ ನಡೆಯುತ್ತಾ ಹೋದ.

ಗಾಂಧೀಜಿಯ ಚಿತಾಭಸ್ಮವನ್ನಿಟ್ಟು ಅದಕ್ಕೆ ಸ್ಮಾರಕ ಕಟ್ಟಿದ್ದರು. ಸುತ್ತಲೂ ಮಳೆ ಮರಗಳು ರಾಕ್ಷಸಾಕಾರದಲ್ಲಿ ಬೆಳೆದು ನಿಂತು ಬಿಸಿಲು ನೆಲಕ್ಕೆ ತಾಕದೇ ನೆರಳು ಹೇರಳವಾಗಿತ್ತು. ಆ ಜಾಗ ನಿದ್ದೆಗೆ ಹೇಳಿ ಮಾಡಿಸಿದಂತಿದೆ ಎಂದು ಅಂದುಕೊಂಡು ಅತ್ತ ನಡೆದ. ಸ್ಮಾರಕದ ಹಿಂದಿನ ಭಾಗಕ್ಕೆ ಆನಿಕೊಂಡು ಒಂದು ಹೆಂಗಸು ಕೂತಿದ್ದಾಳೆ, ಗಾಳಿಗೆ ಆಕೆಯ ಕೂದಲುಗಳು ಹಾರಾಡುತ್ತಿವೆ, ಕೂದಲನ್ನು ಸರಿ ಮಾಡಿಕೊಳ್ಳುವುದಾಗಲಿ ಬೀಸುತ್ತಿರುವ ಗಾಳಿ ಮುಖಕ್ಕೆ ತಾಕದಂತೆ ಕೈ ಅಡ್ಡ ಹಿಡಿಯುವುದಾಗಲಿ ಆಕೆ ಮಾಡುತ್ತಿಲ್ಲ. ನೆರಳು ಬಿದ್ದು ಮುಖ ಅಸ್ಪಷ್ಟವಾಗಿ ಕಾಣುತ್ತಿದೆ. ಆಕೆ ಯಾರನ್ನೋ ಕಾಯುತ್ತಿರುವಂತೆ ಅನ್ನಿಸುತ್ತಿದೆ.

ಕುರುಚಲು ಗಡ್ಡ, ಹತ್ತು ಬೆರಳಿಗೆ ಹತ್ತು ಉಂಗುರಗಳು, ಕತ್ತಿನಲ್ಲಿ ನಾಯಿ ಚೈನಿನಷ್ಟೇ ದಪ್ಪದಾದ ಸರ, ದಢೂತಿ ಮನುಷ್ಯನೊಬ್ಬ ಆಕೆಯ ಮುಂದೆ ಬಂದು ನಿಂತ. ಭುಜದ ಮೇಲೆ ಕೈ ಇಟ್ಟು ಮಾತನಾಡಿಸುತ್ತಿದ್ದ. ಆಕೆ ಪ್ರತಿರೋಧ ತೋರದೇ ಪ್ರತಿಕ್ರಿಯಿಸುವಂತೆ ತೋರಿತು.

ದಢೂತಿ ವ್ಯಕ್ತಿ ಟಾರು ರೋಡಿಗೆ ಬಂದು ಅಲ್ಲೆಲ್ಲೋ ಹೋಗುತ್ತಿದ್ದ ಆಟೋವನ್ನು ಕೈ ಬೀಸಿ ಕರೆದ. “ಶ್ರೀ ಲಕ್ಷ್ಮಿ ಲಾಡ್ಜಿಗೆ ಹೋಗ್ಬೇಕು!”

“ನಲ್ವತ್ರುಪಾಯಿ ಆಗುತ್ತೆ ಸಾರ್”.

“ಹೂ ಸರಿ.”

ಸ್ಮಾರಕದ ಹಿಂದೆ ಕೂತಿದ್ದ ಹೆಂಗಸು ಸೆರಗು ಸರಿ ಮಾಡಿಕೊಂಡು, ಕೂದಲು ಸರಿ ಪಡಿಸಿಕೊಂಡು ಸಿದ್ಧವಾದಂತೆ ತೋರಿತು. ಚಿಟಿಕೆ ಹೊಡೆದು ಆಟೋದಲ್ಲಿ ಬಂದು ಕೂರುವಂತೆ ಹೇಳಿದ. ಸೆರಗನ್ನು ಮುಖದ ಅರ್ಧ ಭಾಗ ಮರೆಮಾಚುವಂತೆ ಇನ್ನರ್ಧ ಮುಖ ಕಾಣುವಂತೆ ಹಿಡಿದು ಬಂದು ಕೂತಳು. ಆಕೆಯ ನಂತರ ದಢೂತಿ ಮನುಷ್ಯ ಕೂತ. ಆಕೆ ಕತ್ತು ಮುಂದು ಮಾಡಿದಾಗಲೇ ಗೊತ್ತಾಗಿದ್ದು ಪ್ರಮೀಳಾ ಎಂದು. ಆಕಾಶವೇ ಮೇಲೆ ಬಿದ್ದಂತೆ ಕುಸಿದುಬಿಟ್ಟ.

ಪ್ರತಿಕ್ರಿಯಿಸಿ: feedback@sudha.co.in